ದಕ್ಷತೆಯಿಂದ ನೋಡಿಕೊಳ್ಳುವಂಥ ಅಧಿಕಾರಿಗಳೇ ಮುಖ್ಯ ಕಾರಣ. ಅಕ್ಕುಮಲೇಟೆಡ್ ಲಾಸ್ ಆಗಿದೆ. ಅದರ ಮೇಲೆ ಬರ್ಡನ್ ಸಾಕಷ್ಟು ಇದೆ. ಇಂಟರೆಸ್ಟ್ ಕೊಡುವುದರಲ್ಲಿಯೂ ಕೈಗಾರಿಕೆ ನಷ್ಟ ತೋರಿಸುತ್ತಿದೆ.

ಇವತ್ತು ಅಲ್ಲಿಗೆ ಒಳ್ಳೆಯ ಅಧ್ಯಕ್ಷರನ್ನು ನೇಮಕ ಮಾಡಿರುವುದರಿಂದ, ಅದು ಉತ್ತಮವಾದ ಕೈಗಾರಿಕೆಯಾಗಿ ಉಳಿಯುವುದಕ್ಕೆ ಅವಕಾಶ ಮಾಡಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ಮುಂದೆಯೂ ಹೆಚ್ಚಿನ ಸಹಾಯ ಮಾಡಿ, ಇದು ಕರ್ನಾಟಕದ ಹೆಮ್ಮೆಯ ಕೈಗಾರಿಕೆಯಾಗಿ ಉಳಿಯುವುದಕ್ಕೆ ಪ್ರಯತ್ನ ಮಾಡಿ. ಬೇಕಾದಷ್ಟು ಮಲ್ಟಿ ನ್ಯಾಷನಲ್ ಕಂಪನಿಗಳು ಬಂದು ಸ್ಪರ್ಧಯಲ್ಲಿದ್ದರೂ ಸಹಿತ, ಒಳ್ಳೆಯ ದೃಷ್ಟಿಯಿಂದ ಆಡಳಿತ ಮಾಡುವ, ದಕ್ಷ ಅಧಿಕಾರಿಗಳು ಅಲ್ಲಿ ಬಂದರೆ, ಉತ್ತಮವಾದ ಕೈಗಾರಿಕೆಯಾಗುತ್ತದೆ ಎನ್ನವುದರಲ್ಲಿ ಯಾವುದೇ ಪ್ರಶ್ನೆ ಇಲ್ಲ. ಈ ದಿಸೆಯಲ್ಲಿ ಸ್ಪರ್ಧಾತ್ಮಕವಾಗಿ, ಕೆಲಸ ಮಾಡುವಂಥ, ದಕ್ಷ ಅಧಿಕಾರಿಯನ್ನು ನೇಮಿಸಿ. ಸರ್ಕಾರ ಈ ಕೈಗಾರಿಕೆಯನ್ನು ಉಳಿಸಿಕೊಳ್ಳಬೇಕೆಂದು, ತಮ್ಮ ಮೂಲಕ ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೂ ಯಾವುದಾದರೂ ಸಲಹೆ ಇದ್ದರೆ ಕೊಡಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇನೆ.

ನಿಯಮ 351ರ ಅಡಿಯಲ್ಲಿ ಬರತಕ್ಕ ವಿಷಯಗಳು

ಅರಕಲಗೂಡು ತಾಲ್ಲೂಕಿನ, ಕೋಣನೂರು - ಕಟ್ಟೆಪುರ ಮಧ್ಯದಲ್ಲಿ ಕಾವೇರಿ ನದಿಗೆ ತೂಗು ಸೇತುವೆ ನಿರ್ಮಾಣ

ಶ್ರೀ ಎನ್.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಅರಕಲಗೂಡು ತಾಲ್ಲೂಕಿನ, ಹೊಣಸೂರು - ಕಟ್ಟೇಪುರ ಮಧ್ಯದಲ್ಲಿ ಕಾವೇರಿ ನದಿಗೆ ತೂಗು ಸೇತುವೆ ನಿರ್ಮಿಸಲು ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ದೊರಕಿ, ಟೆಂಡರ್ ಸಹ ಆಗಿ, ಅಧಿಕಾರಿಗಳ ಅನವಶ್ಯಕ ಅಡಚಣೆಗಳಿಂದಾಗಿ ಕೆಲಸದ ಪ್ರಗತಿ ಕುಂಠಿತವಾಗಿರುವುದರಿಂದ, ಸಾರ್ವಜನಿಕ ಸೌಲಭ್ಯದಿಂದ ವಂಚಿತರಾಗಿ ತೊಂದರೆಗೆ ಒಳಗಾಗುತ್ತಿರುವ ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ತೂಗು ಸೇತುವೆ ನಿರ್ಮಿಸಲು ಒತ್ತಾಯಪೂರ್ವಕವಾಗಿ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಸದರಿ ತೂಗು ಸೇತುವೆಯು ಪಾದಚಾರಿಗಳ ಸೇತುವೆಯಾಗಿದ್ದು, ಫೆಬ್ರವರಿ 1993 ರಲ್ಲಿ ರೂ.9.98 ಲಕ್ಷಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಸನದಲ್ಲಿ ಇವರಿಂದ ಆಡಳಿತ ಅನುಮೋದನೆಯಾಗಿದ್ದು ಕಾರ್ಯಪಾಲಕ ಇಂಜಿನಿಯರ್ ಜಿಲ್ಲಾ ಪರಷತ್ ಇಂಜಿನಿಯರಿಂಗ್ ವಿಭಾಗ ಹಾಸನ ಇವರು ಏಪ್ರೀಲ್ 1993ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. 1994-95 ರೂ. 1.50 ಲಕ್ಷಗಳ ಅನುದಾನವನ್ನು ಜಿಲ್ಲಾ ಪರಿಷತ್ ಆಯವ್ಯಯ ಪಟ್ಟಿಯಲ್ಲಿ ಹೊಂದಿರುತ್ತದೆ. ಈ ಸೇತುವೆಯು 170 ಮೀ. ಉದ್ದ ಹಾಗೂ1.2 ಮಿ. ಅಗಲವಿರುತ್ತದೆ.

ಸದರಿ ಸಿವಿಲ್ ಕಾಮಗಾರಿಗಳಿಗೆ ಜೂನ್ 93 ರಲ್ಲಿ ಟೆಂಡರ್ ಕರೆಯಲಾಗಿದ್ದು ಅಕ್ಟೋಬರ್ 1993 ರಲ್ಲಿ ಶ್ರೀ ಸೈಯದ್ ಅಲಿ ಅವರ ಕನಿಷ್ಟ ಗುತ್ತಿಗೆಯಾದ 9.5 ಶೇಕಡಾ ಹೆಚ್ಚುವರಿಯ ಟೆಂಡರನ್ನು ಸ್ವೀಕಾರ ಮಾಡಲಾಗಿದೆ. ಕರಾರಿನಂತೆ ಸಿವಿಲ್ ಕಾಮಗಾರಿಯನ್ನು ಜನವರಿ 1994ರಲ್ಲಿ ಪೂರೈಸಬೇಕಾಗಿತ್ತು.

ಕಾಮಗಾರಿಯನ್ನು ಡಿಸೆಂಬರ್ 1993ರಲ್ಲಿ ಪ್ರಾರಂಭ ಮಾಡಿದಾಗ ಗಟ್ಟಿ ಪಾಯ ದೊರೆಯದ ಪ್ರಯುಕ್ತ ವಿನ್ಯಾಸವನ್ನು ಮಾರ್ಪಡಿಸಬೇಕಾಯಿತು. ಮರು ವಿನ್ಯಾಸವನ್ನು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು ಆಗಸ್ಟ್ 1994ರಲ್ಲಿ ಮಂಜೂರು ಮಾಡಿರುತ್ತಾರೆ.

ನವಂಬರ್ 1994ರಲ್ಲಿ ಗುಣ ನಿಯಂತ್ರಣ ವಿಭಾಗದವರು ಸದರಿ ಸೇತುವೆಯನ್ನು ಬಂಡೆಕಲ್ಲಿನ ಮೇಲೆ ಆ್ಯಂಕರೇಜ್ ಮಾಡಬೇಕೆಂದು ಮತ್ತು ತಳಪಾಯ ನಿರ್ಣಯಿಸಲು ಟ್ರಯಲ್ ಬೋರ್ ತೆಗೆದುಕೊಂಡು ವಿನ್ಯಾಸವನ್ನು ಅಂತಿಮಗೊಳಿಸಬೇಕಾಗುತ್ತದೆ. ಈಗ ಪ್ರವಾಹ ಇಳಿಮುಖವಾಗಿರುವುದರಿಂದ ಟ್ರಯಲ್ ಬೋರ್ ತೆಗೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಏತನ್ಮಧ್ಯೆ ನವಂಬರ್ 1994ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳವನ್ನು ಪರಿವೀಕ್ಷಿಸಿ ಮುಂದಿನ ಆದೇಶದವರೆಗೆ ಕಾಮಗಾರಿಯನ್ನು ಮುಂದುವರೆಸಬಾರದೆಂದು ಸೂಚಿಸಿರುತ್ತಾರೆ.

ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ಮಳೆಗಾಲ ಪ್ರಾರಂಭಕ್ಕೆ ಮುಂಚೆಯೇ ವಿನ್ಯಾಸಗಳನ್ನು ಅಂತಿಮವಾಗಿ ನಿರ್ಧರಿಸಿ ನದಿಯಲ್ಲಿ ಪ್ರವಾಹ ಇಳಿಮುಖವಾದೊಡನೆ ಕೆಲಸವನ್ನು ಪ್ರಾರಂಭಿಸಿ ಶೀಘ್ರವಾಗಿ ಮುಗಿಸಲು ಮುಖ್ಯ ಇಂಜಿನಿಯರ್ ಅವರು ಕಾರ್ಯಪಾಲಕ ಇಂಜಿನಿಯರ್ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ಸೂಚನೆಯನ್ನು ನೀಡಿರುತ್ತಾರೆ.

ಗ್ರಾಮ ಪಂಚಾಯ್ತಿಗಳಿಗೆ, ಕಾರ್ಯದರ್ಶಿಯವರ ನೇಮಕ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೇ, ಗ್ರಾಮ ಪಂಚಾಯಿತಿ ವ್ಯವಸ್ಥೆ ಜಾರಿಗೆ ಬಂದು, ವರ್ಷ ಸಂದರೂ ಇನ್ನೂ ಎಲ್ಲಾ ಪಂಚಾಯತಿಗಳಿಗೆ ಕಾರ್ಯದರ್ಶಿಯವರನ್ನು ನೇಮಕ ಮಾಡಲಿಲ್ಲ. ಇದರಿಂದ ಗ್ರಾಮ ಪಂಚಾಯಿತಿಗಳು ಸುವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಅಗತ್ಯವಾದ ದಾಖಲೆ ಸಿಗುತ್ತಾ ಇಲ್ಲ. ಅಭಿವೃದ್ಧಿ ಕೆಲಸಗಳು ಕುಂಠಿತವಾಗುತ್ತಿವೆ. ನೀರು ಸರಬುರಾಜು ಕಾಮಗಾರಿಗಳು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಾ ಇಲ್ಲ. ಕೆಲವು ಗ್ರಾಮ ಪಂಚಾಯತಿ ಕಾರ್ಯದರ್ಶಿಯವರಿಗೆ ಮೂರು ನಾಲ್ಕು ಗ್ರಾಮ ಪಂಚಾಯತಿಗಳ ಹೊಣೆ ಇದೆ. ಆದ್ದರಿಂದ, ಕೆಲವು ಗ್ರಾಮ ಪಂಚಾಯತಿಗಳು ಸರಿಯಾಗಿ ಬಾಗಿಲನ್ನೂ ತೆಗೆಯುತ್ತಿಲ್ಲ. ಆದ್ದರಿಂದ, ಇನ್ನಾದರೂ ಅಗತ್ಯವಿರುವ ಗ್ರಾಮ ಪಂಚಾಯತಿ ಕಾರ್ಯದರ್ಶಿಯವರನ್ನು ನೇಮಿಸಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೇ,

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ರಾಜ್ಯದಲ್ಲಿ ಒಟ್ಟು 5673 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಜಿಸಲಾಗಿದೆ. ಸದರಿ ಅಧಿನಿಯಮದ ಪ್ರಕರಣ 111ರ ಪ್ರಕಾರ ಸರ್ಕಾರವು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಕಾರ್ಯದರ್ಶಿಯನ್ನು ನೇಮಿಸಬೇಕಾಗುತ್ತದೆ. ಅದರಂತೆ 6000ಕ್ಕಿಂತ ದರ್ಜೆ ಸಹಾಯಕರ ವೇತನ ಶ್ರೇಣಿಯ 1966 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಮತ್ತು 6000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ 3707 ಗ್ರಾಮ ಪಂಚಾಯಿತಿಗಳಿಗೆ ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯ 3707 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ಸೃಜಿಸಲಾಗಿದೆ.